| ಕರ್ನಾಟಕ ವಿಧಾನ ಪರಿಷತ್ತು | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 751 |
| ಮಾನ್ಯ ಸದಸ್ಯರ ಹೆಸರು: | ಶ್ರೀ ಡಿ .ಎಸ್. ಅರುಣ್ |
| ಉತ್ತರಿಸಬೇಕಾದ ದಿನಾಂಕ: | 11.12.2023. |
| ಉತ್ತರಿಸಬೇಕಾದ ಸಚಿವರು: | ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ | ರಾಷ್ಟ್ರೀಯ ವೈದ್ಯಕೀಯ ಮಂಡಳಿ, ನವದೆಹಲಿ ಇವರ ಮಾರ್ಗಸೂಚಿ ಮತ್ತು ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಶಿವಮೊಗ್ಗ ಇವರ ಬೈಲಾ ಪ್ರಕಾರ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾಗಲು ಪ್ರಾಧ್ಯಾಪಕರಾಗಿ ಕನಿಷ್ಠ ಐದು ವರ್ಷಗಳ ಅನುಭವ ಇರಬೇಕೆಂಬ ಹಾಗೂ ರಾಷ್ಟ್ರೀಯ ವೈದ್ಯಕೀಯ ಮಂಡಳಿ ನವದೆಹಲಿ ಇವರ ಮಾರ್ಗಸೂಚಿ ಪ್ರಕಾರ ತಾತ್ಕಾಲಿಕವಾಗಿ ಪ್ರಭಾರಿ ವ್ಯವಸ್ಥೆ ಮಾಡುವಾಗಲೂ ಅರ್ಹತೆ ಮತ್ತು ಜೇಷ್ಠತೆಯನ್ನು ಪಾಲಿಸಬೇಕೆಂಬ ನಿಯಮವಿದೆಯೇ; | ರಾಷ್ಟ್ರೀಯ ವೈದ್ಯಕೀಯ ಮಂಡಳಿ, ನವದೆಹಲಿ ಇವರ ಮಾರ್ಗಸೂಚಿ Teachers Eligibility Qualification in Medical Institution Regulations 2022, (F.No:NMC/MCI-23(1) 2021-MED dated: 14.02.2022) ನಿಮಮ-3.7ರಲ್ಲಿ ವೈದ್ಯಕೀಯ ಅಧೀಕ್ಷಕರ ಹುದ್ದೆಗೆ ವೈದ್ಯಕೀಯ ಕ್ಷೇತ್ರದಲ್ಲಿ ಸ್ನಾತಕೋತ್ತರ ಪದವಿ ಹೊಂದಿದ್ದು, ವೈದ್ಯಕೀಯ ಕಾಲೇಜಿನಲ್ಲಿ ಪ್ರಾಧ್ಯಾಪಕರು ಅಥವಾ ಸಹ ಪ್ರಾಧ್ಯಾಪಕರ ಹುದ್ದೆಯಲ್ಲಿ 10 ವರ್ಷ ಬೋಧನ ಅನುಭವ ಅದರಲ್ಲಿ ಕನಿಷ್ಠ 05 ವರ್ಷಗಳ ಸೇವೆಯನ್ನು ಪ್ರಾಧ್ಯಾಪಕರ ಹುದ್ದೆಯಲ್ಲಿ ಸಲ್ಲಿಸಿರಬೇಕು ಎಂದಿದೆ. ಆದರೆ ತಾತ್ಕಾಲಿಕವಾಗಿ ಪ್ರಭಾರಿ ವ್ಯವಸ್ಥೆ ಕುರಿತು ಯಾವುದೇ ಮಾಹಿತಿ ಇರುವುದಿಲ್ಲ.<br>ಸಂಸ್ಥೆಯ ಬೈಲಾದಲ್ಲಿ ಸದರಿ ಹುದ್ದೆಯನ್ನು ಆಯ್ಕೆಯ ಸಮಿತಿಯ ಮೂಲಕ ನೇಮಕ ಮಾಡಲು ಅವಕಾಶ ಕಲ್ಪಿಸಿದೆ. ಸದರಿ ಹುದ್ದೆಗೆ ಅರ್ಹತೆಯನ್ನು C &R ನಲ್ಲಿ ನಿಗಧಿಪಡಿಸುವುದು ಮತ್ತು C & R ರೂಪಿಸುವವರೆಗೆ MCI ಮಾರ್ಗಸೂಚಿಗಳನ್ನು ಅನುಸರಿಸಲು |
| ಆ | ಪ್ರಸ್ತುತ ಮೆಗ್ಗಾನ್ ಆಸ್ಪತ್ರೆಗೆ ವೈದ್ಯಕೀಯ ಅಧೀಕ್ಷಕರಾಗಿ ನೇಮಕ ಮಾಡುವಾಗ ಈ ನಿಯಮವನ್ನು ಪಾಲಿಸಲಾಗಿದೆಯೇ; | ರಾಷ್ಟ್ರೀಯ ವೈದ್ಯಕೀಯ ಮಂಡಳಿ ನಿಯಮ ಖಾಯಂ ಹುದ್ದೆಗೆ ಮಾತ್ರ ಅನ್ವಯಿಸುತ್ತದೆ. ಸರ್ಕಾರದ ಆದೇಶ ಸಂಖ್ಯೆ:ಎಂ.ಇ.ಡಿ 308 ಎಂಪಿಎಸ್ 2023 ದಿನಾಂಕ:28.07.2023ರಲ್ಲಿ ಡಾ.ಟಿ.ಡಿ.ತಿಮ್ಮಪ್ಪ, ಸಹಪ್ರಾಧ್ಯಾಪಕರು, ಇ.ಎನ್.ಟಿ ವಿಭಾಗ ಇವರನ್ನು ವೈದ್ಯಕೀಯ ಅಧೀಕ್ಷಕರ ಹುದ್ದೆಗೆ ಅಧಿಕ ಪ್ರಭಾರದಲ್ಲಿರಿಸಿ ಆದೇಶಿಸಲಾಗಿದೆ.<br>ಈ ಹಿಂದೆ ಸಹ ಸರ್ಕಾರದ ಅಧಿಸೂಚನೆ ಸಂಖ್ಯೆ:ಎಂಇಡಿ 160 ಎಂಪಿಎಸ್ 2020 ದಿನಾಂಕ:21.07.2020ರಲ್ಲಿ ಡಾ. ಶ್ರೀಧರ್, ಸಹಪ್ರಾಧ್ಯಾಪಕರು ಇ.ಎನ್.ಟಿ. ವಿಭಾಗ ಇವರನ್ನು ವೈದ್ಯಕೀಯ ಅಧೀಕ್ಷಕರ ಹುದ್ದೆಗೆ ಅಧಿಕ ಪ್ರಭಾರದಲ್ಲಿರಿಸಿ ಆದೇಶಿಸಲಾಗಿತ್ತು. ಸದರಿಯವರು 03 ವರ್ಷಕ್ಕಿಂತ ಹೆಚ್ಚು ಅವಧಿಗೆ ವೈದ್ಯಕೀಯ ಅಧೀಕ್ಷಕರಾಗಿ ಸೇವೆಸಲ್ಲಿಸಿದ್ದು, NMC ಪರಿವೀಕ್ಷಣೆಯಲ್ಲಿ ಯಾವುದೇ ಆಕ್ಷೇಪಣೆ ಬಂದಿರುವುದಿಲ್ಲ. |

| | | |
|---|---|---|
| ಇ | ಈ ನಿಯಮಗಳನ್ನು ಉಲ್ಲಂಘನೆ ಮಾಡಿ ವೈದ್ಯಕೀಯ ಅಧೀಕ್ಷಕರನ್ನು ನೇಮಕಾತಿ ಮಾಡಿದರೆ ರಾಷ್ಟ್ರೀಯ ವೈದ್ಯಕೀಯ ಮಂಡಳಿಯ ವಾರ್ಷಿಕ ತಪಾಸಣೆಯ ಸಂದರ್ಭದಲ್ಲಿ ಕಾಲೇಜಿನ ಮಾನ್ಯತೆಗೆ ಧಕ್ಕೆಯಾಗುವ ಸಂಭವವಿರುವುದು ಇದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಈ ಹಿಂದೆ ಸಹ ವೈದ್ಯಕೀಯ ಅಧೀಕ್ಷಕರ ಹುದ್ದೆಗೆ ಇದೇ ರೀತಿ ನೇಮಕವಾಗಿದ್ದು, ಸದರಿಯವರು 03 ವರ್ಷಗಳ ಸೇವೆ ಸಲ್ಲಿಸಿದ್ದು NMCಯಿಂದ ಯಾವುದೇ ಆಕ್ಷೇಪಣೆ ಬಂದಿರುವುದಿಲ್ಲ. |
| ಈ | ಒಂದು ವೈದ್ಯಕೀಯ ಕಾಲೇಜಿನ ಜವಾಬ್ದಾರಿ ಹುದ್ದೆಗಳಾದ ನಿರ್ದೇಶಕರು, ಪ್ರಾಂಶುಪಾಲರು ಮತ್ತು ವೈದ್ಯಕೀಯ ಅಧೀಕ್ಷಕರನ್ನು ನೇಮಕ ಮಾಡುವಾಗ ಅಧಿಕಾರಿಯ ಹಿಂದಿನ ಐದು ವರ್ಷಗಳ ವಾರ್ಷಿಕ ನಿರ್ವಹಣಾ ವರದಿಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂಬ ಸರ್ಕಾರಿ ನಿಯಮವಿದ್ದರೂ ಮೆಗ್ಗಾನ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾಗಿ ನೇಮಕ ಮಾಡುವಾಗ ಈ ನಿಯಮವನ್ನು ಪಾಲಿಸಲಾಗಿದೆಯೇ: | ಖಾಯಂ ಹುದ್ದೆಗೆ ನೇಮಕ ಮಾಡುವಾಗ ಕಾರ್ಯ ನಿರ್ವಹಣಾ ವರದಿಗಳನ್ನು ಪರಿಶೀಲನೆ ಮಾಡಲಾಗುವುದು. |
| ಉ | ಸದರಿ ಆಸ್ಪತ್ರೆಗೆ ವೈದ್ಯಕೀಯ ಅಧೀಕ್ಷಕರಾಗಿರುವವರು ಈ ಹಿಂದೆ ಹಲವು ಬಾರಿ ಅಶಿಸ್ತಿನ ವರ್ತನೆಗಾಗಿ ಅವರಿಗೆ ನೋಟಿಸ್‌ಗಳನ್ನು ನೀಡಿ ಎಚ್ಚರಿಕೆಯನ್ನು ನೀಡಲಾಗಿದೆಯೆಂದು ತಿಳಿದು ಬಂದಿದ್ದು, ಇಂತಹ ವ್ಯಕ್ತಿಯಿಂದ ಆಸ್ಪತ್ರೆಯ ಸಿಬ್ಬಂದಿಗಳಲ್ಲಿ ಶಿಸ್ತನ್ನು ಮೂಡಿಸುವುದು ಸಾಧ್ಯವೇ: ಈ ಬಗ್ಗೆ ಸರ್ಕಾರದ ನಿಲುವೇನು? | ಸದರಿಯವರ ವಿರುದ್ಧ ಸಂಸ್ಥೆಯಲ್ಲಿ ಯಾವುದೇ ಇಲಾಖೆ ವಿಚಾರಣೆಯಾಗಲಿ, ಪ್ರಸ್ತಾವನೆಯಾಗಲಿ ಇರುವುದಿಲ್ಲ. ಆದ್ದರಿಂದ ವಿಭಾಗದ ಮುಖ್ಯಸ್ಥರಿಂದ ನೀಡಲಾದ ಸಾಮಾನ್ಯ ನೋಟಿಸ್ ಅನ್ನು ಪರಿಗಣಿಸಲು ನಿಯಮದಲ್ಲಿ ಅವಕಾಶವಿರುವುದಿಲ್ಲ. ಈ ಹಿಂದೆ ಕರ್ತವ್ಯ ನಿರ್ವಹಿಸಿದ ಡಾ.ಶ್ರೀಧರ್ ವಿರುದ್ಧ ಲೋಕಾಯುಕ್ತ ದೂರುಗಳು, ನ್ಯಾಯಾಲಯದಲ್ಲಿ ಪ್ರಕರಣಗಳು, ಚುನಾವಣಾ ದೂರುಗಳು ಸದರಿಯವರ ನೇಮಕಾತಿಯಲ್ಲಿ ಅಕ್ರಮ ದೂರುಗಳಿದ್ದರೂ ಸಹ ಇಲಾಖಾ ವಿಚಾರಣೆ ಇಲ್ಲವಾದ್ದರಿಂದ ಸದರಿಯವರನ್ನು 03 ವರ್ಷಗಳ ಕಾಲ ಮುಂದುವರೆಸಲಾಗಿದೆ. |

**ಸಂ: ಎಂಇಡಿ 626 ಎಂಪಿಎಸ್ 2023**

**(ಡಾ:ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು